ಪ್ರೋಗ್ರೆಸ್ ರಿಪೋರ್ಟ್ ಬಂದಕೂಡಲೇ ಅದನ್ನು ರಿಲೀಸ್ ಮಾಡಲಿಕ್ಕೆ ಆರ್ಡರ್ ಮಾಡುತ್ತೇವೆ. ಇದರ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚೆಯಾಗಿದೆ ಈಗಾಗಲೇ ಮುಖ್ಯಮಂತ್ರಿಗಳು ಆದೇಶವನ್ನು ಸಹ ಕೊಟ್ಟಿದ್ದಾರೆ. ಮುಂದಿನ ಸಚಿವ ಸಂಪುಟದಲ್ಲಿ ಇದರ ಬಗ್ಗೆ ಏನಾಗಿದೆ ಎಂಬುದನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿದ್ದಾರೆ. ಅದು ಕ್ಯಾಬಿನೆಟ್‌ನಲ್ಲಿ ಚರ್ಚೆಗೆ ಬರುತ್ತದೆ. ತಾವು ಹೇಳಿದ್ದು ಒಳ್ಳೆಯ ಸಲಹೆಯಾಗಿದೆ. ಏಕೆಂದರೆ ಇಷ್ಟರವರೆಗೆ ಹಲವಾರು ಮನೆಗಳು ಇನ್ನೂ ಸಂಪೂರ್ಣವಾಗಲಿಕ್ಕೆ ಇದೆ. ಜಿಲ್ಲಾಪರಿಷತ್ತುಗಳು ಆದಷ್ಟು ಬೇಗನೆ ಪ್ರೋಗ್ರೆಸ್ ರಿಪೋರ್ಟ್ ಕಳುಹಿಸುವ ಬಗ್ಗೆ ನಾವು ಆರ್‌ಡಿಪಿಆರ್ ಮಿನಿಸ್ಟರ್ ಜೊತೆಯಲ್ಲಿ ಮಾತನಾಡಿದ್ದೇವೆ. ಅದು ಬಂದಕೂಡಲೇ ಆದಷ್ಟು ಬೇಗನೆ ಈ ಮನೆಗಳನ್ನು ಮುಗಿಸಲಿಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತು 1990-91ರ ಬಗ್ಗೆ ಹೇಳಿದ್ದೀರಿ. ಈಗ ಈ ಕಾರ್ಯಕ್ರಮವನ್ನು ನಿಲ್ಲಿಸಿದ್ದೇವೆ. ಹೊಸದಾಗಿ ಆಶ್ರಯ ಸ್ಕೀಮ್‌ನಲ್ಲಿ 15 ಸಾವಿರ ರೂಪಾಯಿಯಲ್ಲಿ ಮನೆಯನ್ನು ಕಟ್ಟುಕೊಡುತ್ತೇವೆ. ಏಕೆಂದರೆ 8 ಸಾವಿರ ರೂಪಾಯಿಯಲ್ಲಿ ಮನೆಯನ್ನು ಕಟ್ಟಲಿಕ್ಕೆಸಾಧ್ಯವಾಗುವುದಿಲ್ಲ. ಆದ್ದರಿಂದ ಹೋಸ ಸ್ಕೀಮನ್ನು . ನಾವು ಸ್ಟೇಟ್ ಗೌರ್ನಮೆಂಟ್‌ನಿಂದ ತೆಗೆದುಕೊಂಡು ಬಂದಿದ್ದೇವೆ. 15 ಸಾವಿರ ರೂಪಾಯಿಯಲ್ಲಿ ಮನೆಯನ್ನು ಕಟ್ಟುವಂತಹ ಕೆಲಸವನ್ನು ಮಾಡಿದ್ದೇವೆ. ಸ್ಟೇಟ್‌ಗೌರ್ನಮೆಂಟ್‌ನಿಂದ ಏನು ಸಬ್ಸಿಡಿ ಕೊಡಬೇಕಾಗಿದೆ ಅದನ್ನು ಸಂಪೂರ್ಣವಾಗಿ ನಾವು ಈಗಾಗಲೇ ರಿಲೀಸ್ ಮಾಡಿ ಆಗಿದೆ.

ನಿಯಮ 334ರ ಮೇರೆಗೆ

1. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಮ್ಕಿ ಹಕ್ಕು ಪದ್ಧತಿ ವಿಶಿಷ್ಟ ತರದಲ್ಲಿ ಜಾರಿಯಲ್ಲಿರುವ ಬಗ್ಗೆ

ಶ್ರೀ ಕೆ.ಸೋಮಪ್ಪ ಸುವರ್ಣ :- ಮಾನ್ಯ ಅಧ್ಯಕ್ಷಣಿಯವರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಮ್ಕಿ ಹಕ್ಕು ಪದ್ಧತಿ ವಿಶಿಷ್ಟ ತರದಲ್ಲಿ ಜಾರಿಯಲ್ಲಿದೆ. ಭೂಶಾಸನದಿಂದ ಒಕ್ಕಲುಗಳಿಗೆ ಭೂ ಒಡೆತನ ಬಂದಾಗ ಹಿಂದಿನ ಧನಿಗಳಿಗಿದ್ದ ಕುಮ್ಕಿ ಭೂಮಿಯ ಹಕ್ಕುಗಳನ್ನು ಧನಿಗಳು ಕಳೆದುಕೊಂಡಿದ್ದು, ಸದರಿ ಭೂಮಿಯನ್ನು ಈಗ ಸ್ವಾಧಿನತೆಯಿರುವರಿಗೆ ಅಕ್ರಮ ಭೂಮಿ ಸಕ್ರಮಗೊಳಿಸುವ ಕಾನೂನಿನಂತೆ ಹಂಚುವರೆ ಸಾಧ್ಯವಾಗುವಂತೆ ಸೂಕ್ತ ನಿರ್ದೇಶನದ ಅವಶ್ಯತೆಯಿದೆ. ಅದೇರೀತಿ ಯಾವುದಾದರೂ ಕುಮ್ಕಿ ಭೂಮಿಯನ್ನು ಯಾರಾದರೂ ಸ್ವಾಧೀನ ತೆಗೆದುಕೊಂಡಾಗ 6 ತಿಂಗಳೊಳಗೆ ಸಂಬಂಧಪಟ್ಟ ಧನಿಗಳು ಆಕ್ಷೇಪ ಅರ್ಜಿ ಕೊಡದಿದ್ದರೆ ಧನಿ ಕುಮ್ಕಿ ಹಕ್ಕು ಕಳೆದು ಕೊಳ್ಳುವ ಕಾನೂನು ಇದ್ದು, ಇಂತಹ ಭೂಮಿ ಸ್ವಾಧೀನದಲ್ಲಿದ್ದು ಕೊಂಡು ಸಕ್ರಮಗೊಳಿಸುವ ಸಮಿತಿಗೆ ಅರ್ಜಿ ಕೊಟ್ಟಿರುವುದರಿಂದ ಭೂಮಂಜೂರಾತಿ ಬಗ್ಗೆ ಸ್ಪಷ್ಟ ನಿರ್ದೇಶಾಸನದ ಅವಶ್ಯಕತೆ ಇದೆ. ಆದುದರಿಂದ ಸರ್ಕಾರವು ಈ ಬಗ್ಗೆ ಸೂಕ್ತ ಅಭಿಪ್ರಾಯನ್ನು ವ್ಯಕ್ತಪಡಿಸುವಂತೆ ಮತ್ತು ಇಂತಹ ಭೂಮಿ ವಿತರಣೆಗೆ ಅನುಕೂಲಮಾಡುವಂತೆ ನಾನು ಉತ್ತರವನ್ನು ಆಶಿಸುತ್ತೇನೆ.

ಶ್ರೀ ಬಿ.ಶಿವಣ್ಣ: (ಸಮಾಜ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷಣಿಯವರೆ, ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಮಾಡುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಕುಮ್ಕಿ ಜಮೀನುಗಳು ಭೂ ಕಂದಾಯ ಅಧಿನಿಯಮ 1964ರ ವಿಧಿ 79(2)ಕ್ಕೊಳಪಟ್ಟಂತೆ ವಿಶೇಷ ಹಕ್ಕುಗಳುಳ್ಳದವುಗಳಾಗಿರುತ್ತವೆ. ಈ ಜಮೀನುಗಳು ಕೊಡಗು ಜಿಲ್ಲೆಯ ಜಮ್ಮಾ ಬಾನೆ ಮಾದರಿಯ ಜಮೀನುಗಳಾಗಿರುತ್ತವೆ. ಇಂತಹ ಜಮೀನುಗಳು ಸರ್ಕಾರಿ ಜಮೀನುಗಳಾಗಿದ್ದು, ಈ ಜಮೀನುಗಳ ಬಾಜು ಖಾತೆದಾರರುಗಳಿಗೆ (ವರ್ಗದವರಿಗೆ) ಸದರಿ ಜಮೀನುಗಳ ಮೇಲೆ ಕೆಲವು

ವಿಶೇಷ ಹಕ್ಕುಗಳನ್ನು ನೀಡಲಾಗಿದೆ. ಈ ಜಮೀನುಗಳನ್ನು ಸೇವಾ ಜಮೀನು (Service lands) ಗಳೆಂತಲೂ ಕರೆಯುವುದು ವಾಡಿಕೆಯಲ್ಲಿದೆ. ಏಕೆಂದರೆ ಈ ಜಮೀನುಗಳು ಬಾಜು ತರಿ ಜಮೀನುಗಳಿಗೆ ಪ್ರಯೋಜನ ಜಮೀನುಗಳಾಗಿರುತ್ತವೆ.

ಭೂ ಕಂದಾಯ ಅಧಿನಿಯಮ 1964ರ ವಿಧಿ 94ಎ ಮತ್ತು ಅದಕ್ಕೆ ಸಂಬಂಧಪಟ್ಟ ಭೂ ಕಂದಾಯ ನಿಯಮಗಳ ಪ್ರಕಾರ ರೂಪಿಸಿರುವ ಸರ್ಕಾರಿ ಜಮೀನುಗಳ ಅಕ್ರಮ ಸಾಗುವಳಿಯನ್ನು ಸಕ್ರಮಣೀಕರಿಸುವ ಯೋಜನೆಯಡಿಯಲ್ಲಿ, ಕುಮ್ಕಿ ಜಮೀನುಗಳ ಅಕ್ರಮ ಸಾಗುವಳಿಯನ್ನು ಸಕ್ರಮೀಕರಿಸಲು ಅವಕಾಶವಿರುವುದಿಲ್ಲ. ಭೂ ಕಂದಾಯ ಅಧಿನಿಯಮ 1964ರ ವಿಧಿ 79(2)ರ ಪರಿಮಿತಿಯಲ್ಲಿ ಬರುವ ಎಲ್ಲಾ ವಿಶೇಷ ಹಕ್ಕುಗಳುಳ್ಳ (ಕುಮ್ಕಿ ಇತ್ಯಾದಿ) ಜಮೀನುಗಳ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸಕೂಡದೆಂಬ ನಿರ್ಭಂಧವನ್ನು ಭೂ ಕಂದಾಯ ಅಧಿನಿಯಮ 1964ರ ವಿಧಿ 94ಎ ರಲ್ಲಿ ವಿಧಿಸಿದೆ.

1.20 ಪಿ.ಎಂ

2 ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನಲ್ಲಿ ರಚಿಸಲಾಗಿರುವ ರಬ್ಬರ್ ಬೆಳೆಗಾರರ ಸಹಕಾರಿ ಸಂಘದ ಮೇಲೆ ವಹಿವಾಟು ತೆರಿಗೆ ವಿಧಿಸಿರುವುದರಿಂದ ಉಂಟಾಗಿರುವ ತೊಂದರೆ.

ಶ್ರೀ ಕೆ.ಗಂಗಾಧರಗೌಡ: (ಬೆಳ್ತಂಗಡಿ):- ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ರಬ್ಬರ್ ಬೆಳೆಗಾರರ ಸಹಕಾರಿ ಸಂಘವನ್ನು ಪ್ರಥಮವಾಗಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ರಚಿಸಲಾಗಿದೆ. ಈ ಸಂಘವು ರಬ್ಬರ್ ಬೆಳೆಗಾರರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಹಲವಾರು ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಆದರೆ, ಹಣಕಾಸು ಇಲಾಖೆಯವರು "ವಹಿವಾಟು ತೆರಿಗೆ "ಯನ್ನು ಈ ಸಂಘದ ಮೇಲೆ ಹೇರಿದ ಪರಿಣಾಮವಾಗಿ ತುಂಬಾ ಕಷ್ಟನಷ್ಟಕ್ಕೆ ಗುರುಯಾಗಿದೆ. ನಮ್ಮ ನೆರೆ ರಾಜ್ಯವಾದ ಕೇರಳದಲ್ಲಿ ರಬ್ಬರ್ ಬೆಳೆಗಾರರ ಸಂಘಕ್ಕೆ ವಹಿವಾಟು ತೆರಿಗೆಯನ್ನು ಹೇರಿಲ್ಲ. ಆದರೆ, ರಬ್ಬರ್ ಬೆಳೆ ಆರಂಭ ಮಾಡುತ್ತಿರುವ ನಮ್ಮ ರಾಜ್ಯದ ರೈತರಿಗೆ ಪ್ರೋತ್ಸಾಹ ಕೊಡುವ ಬದಲು ವಹಿವಾಟು ತೆರಿಗೆ ಹೇರಿ ಉತ್ಸಾಹ ಕುಂಠಿತವಾಗಿದೆ. ಆದುದರಿಂದ. ರಬ್ಬರ್ ಬೆಳೆಗಾರರ ಸಹಕಾರಿ ಸಂಘದ ಮೇಲೆ ವಿಧಿಸಿದ ವಹಿವಾಟು ತೆರಿಗೆಯನ್ನು ಕೇರಳ ರಾಜ್ಯದಲ್ಲಿರುವಂತೆ ವಿನಾಯಿತಿಗೊಳಿಸಬೇಕಾಗಿ ಹಣಕಾಸು ಮಂತ್ರಿಗಳನ್ನು ವಿನಂತಿಸುತ್ತೇನೆ.

(ಶ್ರೀ ಡಿ.ಎ. ಚೆನ್ನಪ್ಪನವರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಎಸ್.ಬಂಗಾರಪ್ಪ (ಮುಖ್ಯಮಂತ್ರಿ):- ಮಾನ್ಯ ಅಧ್ಯಕ್ಷರೆ, ರಬ್ಬರ್ ಬೆಳೆಗಾರರ ಸಹಕಾರ ಸಂಘ, ರಾಜ್ಯ ಮಾರಾಟ ತೆರಿಗೆ ಅಧಿ ನಿಯಮಕ್ಕೆ ಒಳಪಡುತ್ತದೆ. ಅವರು ಮಾಡಿರತಕ್ಕಂಥ ವಾರ್ಷಿಕ ವಹಿವಾಟು 10 ಲಕ್ಷ ಮೀರಿದಲ್ಲಿ ಆ ವಹಿವಾಟಿಗೆ ಶೇಕಡ 1.25 ರಷ್ಟು ವಹಿವಾಟು ತೆರಿಗೆಯನ್ನು ಕೊಡಬೇಕಾಗುತ್ತದೆ (ಶೇಕಡ 1.75 ರಷ್ಟು ಅವರ ವಹಿವಾಟು 200 ಲಕ್ಷ ರೂಪಾಯಿಗಳಿಗೆ ಮೀರಿದ್ದ ಪಕ್ಷದಲ್ಲಿ). ಆದರೆ, ಮೇಲ್ಕಂಡ ಸಹಕಾರ ಸಂಘವು ಬೆಳೆಗಾರರ ಪರವಾಗಿ ದಳ್ಳಾಳಿ ಏಜೆಂಟರಾಗಿ ರಬ್ಬರನ್ನು ಮಾರಾಟ ಮಾಡಿದ ಸಂದರ್ಭದಲ್ಲಿ ಆ ವಹಿವಾಟಿಗೆ "ವಹಿವಾಟು ತೆರಿಗೆ" ಇರುವುದಿಲ್ಲ.

ಮೇಲೆ ಸೂಚಿಸಿದ ಸಹಕಾರ ಸಂಘದ ವ್ಯವಹಾರದ ವಿವರಗಳು ತಕ್ಷಣ ಲಭ್ಯವಿಲ್ಲದ ಕಾರಣ,ಅವರು ವಹಿವಾಟು ತೆರಿಗೆಗೆ ಒಳಪಡುತ್ತಾರೋ, ಇಲ್ಲವೋ, ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಲು ಸಾಧ್ಯವಿರುವುದಿಲ್ಲ.